ದಿಃ 27.03.2026

**ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.1131/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕುಮಾರಸ್ವಾಮಿ | ಪ್ರಾ.ಸಾ.4 |
| ತಂದೆಯ ಹೆಸರು | : | ದೇವೇಂದ್ರಪ್ಪ | ಚಾ.ಸಾ.4 |
| ವಯಸ್ಸು | : | 36 ವರ್ಷ | |
| ಕೆಲಸ | : | ಪೊಲೀಸ್ ಪೇದೆ, ಚಿತ್ರಹಳ್ಳಿ ಗೇಟ್ ಪೊಲೀಸ್ ಠಾಣೆ | ಸಾ ಪ್ರ ಬೋ |
| ವಾಸ | : | ಹೊಳಲ್ಕೆರೆ | ದಿಃ27.03.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ಮೇ 2019 ರಿಂದ ಆಗಸ್ಟ್ 2024 ರವರೆಗೆ ಚಿಕ್ಕಜಾಜೂರು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 15.07.2023 ರಂದು ಸಂಜೆ 6.30 ಗಂಟೆಯ ಸಮಯದಲ್ಲಿ ನಾನು ಠಾಣಾ ಕರ್ತವ್ಯದಲ್ಲಿದ್ದಾಗ, ಠಾಣಾ ವ್ಯಾಪ್ತಿಯ ಚಿಕ್ಕಮ್ಮಿಗನೂರು ಗ್ರಾಮದಲ್ಲಿ ಮಂಜುನಾಥ ಬಿನ್ ಮುದ್ದಪ್ಪರ ಮಹದೇವಪ್ಪರವರು ಅವರ ಕಿರಾಣಿ ಅಂಗಡಿಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮಾರಾಟ ಮಾಡಲು ಮದ್ಯವನ್ನು ಇಟ್ಟುಕೊಂಡಿರುತ್ತಾರೆ ಎಂದು ಚಾಸಾ-1 ರವರಿಗೆ ಮಾಹಿತಿ ಬಂದಿದ್ದು. ಈ ಕುರಿತು ಚಾಸಾ-1 ರವರು ಚಾಸಾ.11 ರವರಿಗೆ ಮುಂದಿನ ಕ್ರಮವನ್ನು ಜರುಗಿಸುವ ಬಗ್ಗೆ ವರದಿಯನ್ನು ನೀಡಿರುತ್ತಾರೆ. ಚಾಸಾ-1 ರವರು ನೀಡಿದ ವರದಿಯ ಆಧಾರದಲ್ಲಿ ಚಾಸಾ.11 ರವರು ಠಾಣಾ ಮೊಕದ್ದಮೆ ಸಂಖ್ಯೆ 115/2023 ರಂತೆ ಪ್ರ.ವ. ವರದಿಯನ್ನು ದಾಖಲಿಸಿ, ಆ ಬಗ್ಗೆ ಚಾಸಾ-1 ರವರಿಗೆ ಮಾಹಿತಿ ನೀಡಿರುತ್ತಾರೆ. ಚಾಸಾ.11 ರವರು ಮಾಹಿತಿಯನ್ನು ನೀಡಿದ ನಂತರದಲ್ಲಿ ಚಾಸಾ-1 ರವರು ನನ್ನನ್ನು ಮತ್ತು ಚಾಸಾ.5 ರವರನ್ನು ಕರೆದುಕೊಂಡು ಠಾಣಾ ಜೀಪಿನಲ್ಲಿ ಸಂಜೆ 6.50 ಕ್ಕೆ ಠಾಣೆಯನ್ನು ಬಿಟ್ಟು ಚಿಕ್ಕ ಎಮ್ಮಿಗನೂರು ಗ್ರಾಮದ ಸಮೀಪ ತಲುಪಿದ್ದು, ಸದರಿ ಗ್ರಾಮದ ಹೊರಹೊಲಯದಲ್ಲಿ ಇದ್ದ ಚಾಸಾ.2 ಮತ್ತು 3 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು ಚಾಸಾ.2 ಮತ್ತು 3 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ಚಾಸಾ-1 ರವರು ನೋಟೀಸನ್ನು ನೀಡಿ ಚಾಸಾ.2 ಮತ್ತು 3 ರವರನ್ನು ನಮ್ಮ ಠಾಣಾ ಜೀಪಿನಲ್ಲಿ ಚಿಕ್ಕ ಎಮ್ಮಿಗನೂರು ಗ್ರಾಮಕ್ಕೆ ಕರೆದುಕೊಂಡು ಹೋಗಿರುತ್ತೇವೆ. ಚಾಸಾ-1 ರವರು ಚಾಸಾ.2,3,5 ಮತ್ತು ನನ್ನೊಂದಿಗೆ ಠಾಣಾ ಜೀಪಿನಲ್ಲಿ ಚಿಕ್ಕ ಎಮ್ಮಿಗನೂರು ಗ್ರಾಮದ ಮಂಜುನಾಥ ರವರ ಕಿರಾಣಿ ಅಂಗಡಿಯ ಸಮೀಪ ರಾತ್ರಿ 7.30 ಕ್ಕೆ ತಲುಪಿರುತ್ತೇವೆ. ನಾವು ಅಂಗಡಿಯ ಸ್ವಲ್ಪ ದೂರದಲ್ಲಿ ನಿಂತು ಸದರಿ

ದಿಃ 27.03.2026

ವ್ಯಕ್ತಿಯು ಮಧ್ಯವನ್ನು ಮಾರಾಟ ಮಾಡುವುದನ್ನು ಖಚಿತಪಡಿಸಿಕೊಂಡಿದ್ದು, ಅಲ್ಲಿ ಇದ್ದಂತಹ ಸಾರ್ವಜನಿಕರು ಸಮವಸ್ತ್ರದಲ್ಲಿ ಇದ್ದ ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ. ನಂತರ ಚಾಸಾ-1, ನಾನು, ಚಾಸಾ.5 ರವರು ಮಂಜುನಾಥ ರವರ ಕಿರಾಣಿ ಅಂಗಡಿಯ ಬಳಿ ಹೋಗಿ ಆತನನ್ನು ಹಿಡಿಯಲು ಪ್ರಯತ್ನಿಸಿದ್ದು, ಆರೋಪಿ ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ. ನಂತರ ಆರೋಪಿ ಸ್ಥಳದಲ್ಲಿ ಬಿಟ್ಟುಹೋಗಿದ್ದ ಚೀಲವನ್ನು ಪರಿಶೀಲಿಸಲಾಗಿ, 90 ಎಂ.ಎಲ್ ನ 50 ರಾಜಾ ವಿಸ್ಕಿಯ ಪೌಚ್‌ಗಳು ಇದ್ದು ಅವುಗಳನ್ನು ಅಮಾನತ್ತುಪಡಿಸಿಕೊಂಡು, ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಬಿಳಿದಾರದಲ್ಲಿ ಕಟ್ಟಿ ಕೆ ಎಂಬ ಅಕ್ಷರದಿಂದ ಮೊಹರು ಮಾಡಿರುತ್ತೇವೆ. ಸದರಿ ಅಮಾನತ್ತುಪಡಿಸಿಕೊಂಡ ಮಧ್ಯದ ಪೌಚುಗಳ ಕುರಿತು ಚಾಸಾ.2 ಮತ್ತು 3 ರವರ ಸಮಕ್ಷಮ ರಾತ್ರಿ 07.30 ರಿಂದ 8.30 ಗಂಟೆಯವರೆಗೆ ಮಹಜರಿನ ಕ್ರಮವನ್ನು ಜರುಗಿಸಿರುತ್ತಾರೆ. ಸಾಕ್ಷಿ ಮಹಜರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2(ಡಿ) ಎಂದು ಗುರುತಿಸಲಾಯಿತು. ಸದರಿ ದಿನದಂದು ಓಡಿ ಹೋದ ವ್ಯಕ್ತಿಯೇ ನ್ಯಾಯಾಲಯದ ಮುಂದಿರುವ ಆರೋಪಿಯೇ ಆಗಿರುತ್ತಾರೆ. ಸಾಕ್ಷಿ ಮಹಜರಿನ ಸಮಯದಲ್ಲಿ ತೆಗೆದ ಛಾಯಾಚಿತ್ರದಲ್ಲಿ ಚಾಸಾ.1 ರಿಂದ 3 ರವರ ಇರುವಿಕೆಯನ್ನು ಮತ್ತು ಅಮಾನತ್ತುಪಡಿಸಿಕೊಂಡ ಮಧ್ಯದ ಪೌಚುಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಕುರಿತು ನಾನು ಚಾಸಾ-11 ರವರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು : ಆರೋಪಿಯ ಪರ ಶ್ರೀ ಎಸ್.ವಿ.ಕೆ. ವಕೀಲರಿಂದ**

3. ನಾನು ದಿನಾಂಕ 15.07.2023 ರಂದು ಬೆಳಿಗ್ಗೆ 06.00 ರಿಂದ ರಾತ್ರಿ 09.00 ಗಂಟೆವರೆಗೆ ಕರ್ತವ್ಯದಲ್ಲಿ ಇದ್ದೇನು. ಘಟನಾ ಸ್ಥಳ ನಮ್ಮ ಠಾಣೆಯಿಂದ 08 ಕೀ.ಮೀಟರ್ ಇದೆ. ಚಾಸಾ-1 ರವರಿಗೆ ಬಾತ್ಮಿದಾರರಿಂದ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದ ಕುರಿತು ಮಾಹಿತಿ ಬಂದಿತ್ತು. ಚಾಸಾ-1 ರವರೊಂದಿಗೆ ನಾನು ಮತ್ತು ಚಾಸಾ-5 ರವರು ಹೋಗಿದ್ದೇವು. ನಮ್ಮೊಂದಿಗೆ ಪಂಚರಾದ ಚಾಸಾ-2 ಮತ್ತು 3 ರವರು ಬಂದಿದ್ದರು. ಆರೋಪಿತನನ್ನು ನಾವು ಸುಮಾರು 50 ಅಡಿ ಅಂತರದಲ್ಲಿ ನೋಡಿದ್ದೇವು. ಆರೋಪಿ ಆತನ ಅಂಗಡಿಯ ಮುಂಭಾಗ ವಿದ್ಯುತ್ ದೀಪದ ಬೆಳಕಿನ ಸಹಾಯದಿಂದ ಚೀಲದಲ್ಲಿ ಮಧ್ಯದ ಪೌಚುಗಳನ್ನು ಇಟ್ಟುಕೊಂಡು ಮಾರಾಟು ಮಾಡುತ್ತಿದ್ದನು. ಆರೋಪಿತನ ಸುತ್ತ-ಮುತ್ತ ಕೆಲವು ಸಾರ್ವಜನಿಕರು ಇದ್ದರು. ನಾನು, ಚಾಸಾ-1 ಮತ್ತು 5 ರವರು ಆರೋಪಿತನನ್ನು ಹಿಡಿಯಲು ಪ್ರಯತ್ನಿಸಿದ್ದು, ಆರೋಪಿ ನಮ್ಮನ್ನು ನೋಡಿ ಓಡಿ ಹೋಗಿರುತ್ತಾನೆ. ನಾನು ಆರೋಪಿತನನ್ನು 50 ಅಡಿ ಅಂತರದಲ್ಲಿ ನೋಡಿ ಗುರುತಿಸಿದ್ದು, ಆರೋಪಿತನ ಗುರುತಿಸುವಿಕೆಯ ಬಗ್ಗೆ ಖಚಿತ ಪಡಿಸಿಕೊಂಡಿದ್ದೇನು. ಆರೋಪಿ ಸದರಿ ದಿನದಂದು ಯಾವ ಬಣ್ಣದ ಬಟ್ಟೆಯನ್ನು ಧರಿಸಿದ್ದ ಎಂದು ಗೊತ್ತಿಲ್ಲ. ಆರೋಪಿ ಸದರಿ ದಿನದಂದು ಬಿಟ್ಟು ಹೋದ ಚೀಲವೆ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು. 1 ರ ಚೀಲ ಆಗಿದೆ. ಆರೋಪಿನಿಂದ 90 ಎಂ.ಎಲ್ ನ 50 ಮಧ್ಯದ ಪೌಚುಗಳನ್ನು ಅಮಾನತ್ತುಪಡಿಸಿಕೊಂಡಿದ್ದು,

ದಿಃ 27.03.2026

ಅವುಗಳ ಒಟ್ಟು ಮಾಪನ ನಾಲ್ಕುವರೆ ಲೀಟರ್ ಆಗಿರುತ್ತದೆ. ಜೀಪನ್ನು ನಿಲ್ಲಿಸಿದ್ದ ಸ್ಥಳದ ಚೆಕ್ಕುಬಂದಿ ಗೊತ್ತಿಲ್ಲ. ಕತ್ತಲಾಗಿದ್ದ ಕಾರಣ ಆರೋಪಿ ಓಡಿ ಹೋಗಿದ್ದು, ಹಿಡಿಯಲು ಆಗಲಿಲ್ಲ. ಅಮಾನತ್ತುಪಡಿಸಿಕೊಂಡ ಮದ್ಯದ ಪೌಚುಗಳ ಬ್ಯಾಚ್ ಸಂಖ್ಯೆಯನ್ನು ಮಹಜರಿನಲ್ಲಿ ಉಲ್ಲೇಖ ಮಾಡಿದ್ದಾರೆ. ಆರೋಪಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಕಾರಣ ನಾವು ದಾಳಿ ಮಾಡಿದ್ದೆವು. ಆರೋಪಿ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮಧ್ಯವನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಘಟನಾ ಸಮಯದಲ್ಲಿ ಆರೋಪಿ ಊರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ತಪ್ಪನ್ನು ಎಸಗದಿದ್ದಾಗ್ಯೂ, ಸುಳ್ಳು ದೂರನ್ನು ದಾಖಲಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ__